ಜಮಾಬಂದಿಗೆ ಜಾಗವಿಲ್ಲವೇ?

ಕೆ.ನರಸಿಂಹಮೂರ್ತಿ

Mon, 09/22/2014 - 01:0

ಪಂಚಾಯಿತಿ ಜಮಾಬಂದಿ ನಿರ್ವಹಣೆ. ತಳಹಂತದ ಸರ್ಕಾರವಾದ ಗ್ರಾಮ ಪಂಚಾಯಿತಿಗಳ ಉತ್ತರದಾಯಿತ್ವಕ್ಕೆ ಕೈಗನ್ನಡಿಯಂತೆ. ಜವಾಬ್ದಾರಿಗಳ ನಿರ್ವಹಣೆ, ಪಾರದರ್ಶಕ ಆಡಳಿತ ಮತ್ತು ಅದರಲ್ಲಿ ಜನರ ಪಾಲ್ಗೊಳ್ಳುವಿಕೆಯನ್ನು ಖಚಿತಪಡಿಸುವ ಜಮಾಬಂದಿಗೆ ಈ ಪಂಚಾಯಿತಿ ಅಂಗಳದಲ್ಲಿ ಜಾಗದ ಕೊರತೆ. ಜಾಗವೆಂದರೆ ಭೌತಿಕ ಜಾಗವಲ್ಲ. ಜಮಾಬಂದಿ ಮಾಡುವ ಸಮಯಾವಕಾಶದ ಕೊರತೆ ಅಧಿಕಾರಿ ವಲಯದಲ್ಲಿ ಬದ್ಧತೆಯ ಕೊರತೆ.

ಯಾರಿಗೇ ಆದರೂ, ಯಾವುದಕ್ಕೇ ಆದರೂ ಸಮಯ ಕೊಟ್ಟರೆ ನಿನ್ನನ್ನೇ ಕೊಟ್ಟಂತೆ ಎಂಬ ಮಾತಿದೆ. ಆದರೆ ಹಾಗೆ ಜಮಾಬಂದಿಗೆ ಕೊಡುವ ವಿಚಾರದಲ್ಲಿ ಗ್ರಾಮ ಪಂಚಾಯಿತಿಗಳು ಮತ್ತು ತಾಲ್ಲೂಕು ಪಂಚಾಯಿತಿಗಳು ಚೌಕಾಸಿ ಮಾಡುತ್ತಿರುವುದು ವಿಪರ್ಯಾಸ. 2005ರಲ್ಲಿ ಪಂಚಾಯಿತಿ ಜಮಾಬಂದಿ ನಿರ್ವಹಣೆ ವ್ಯವಸ್ಥೆ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಜಾರಿಗೆ ಬಂತು. ಕರ್ನಾಟಕ ಪಂಚಾಯಿತಿ ರಾಜ್ (ಪಂಚಾಯಿತಿ ಜಮಾಬಂದಿ ನಿರ್ವಹಣೆ) ನಿಯಮಗಳು 2004 ಹೆಸರಿನಲ್ಲಿ ಈ ಅಧಿನಿಯಮ ಮಸೂದೆಯಾಗಿ ಜ ಬಂದಿದೆ.

ತಾಲ್ಲೂಕು ಪಂಚಾಯಿತಿಯ ಒಬ್ಬ ಅಧಿಕಾರಿಯ ನೇತೃತ್ವದಲ್ಲಿ, ವರ್ಷಕ್ಕೊಂದು ಬಾರಿ ಆಗಸ್ಟ್ 16ರಿಂದ ಸೆಪ್ಟೆಂಬರ್ 15ರವರೆಗೆ ಜನರ ಸಮಕ್ಷಮದಲ್ಲಿ ನಡೆಯಬೇಕು. ಗ್ರಾಮ ಪಂಚಾಯಿತಿಯು ನಿರ್ವಹಿಸಿದ ಲೆಕ್ಕಗಳು, ರಿಜಿಸ್ಟರ್‌ಗಳು ಮತ್ತು ಪೂರ್ಣಗೊಳಿಸಿದ ಕಾಮಗಾರಿಗಳ ವಾರ್ಷಿಕ ತನಿಖೆಯನ್ನೇ ಜಮಾಬಂದಿ ಎನ್ನಲಾಗುತ್ತದೆ. ಆಡಳಿತದಲ್ಲಿ ಪಾರದರ್ಶಕತೆ, ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನ, ವಿಳಂಬವಿಲ್ಲದ ನ್ಯಾಯ ಸಮ್ಮತ ಆಡಳಿತಕ್ಕೆ ಈ ವಾರ್ಷಿಕ ತನಿಖೆಯ ಕೆಲಸ ಪಂಚಾಯಿತಿಗಳಲ್ಲಿ ನಿಯಮಿತವಾಗಿ ನಡೆಯುತ್ತಿಲ್ಲ.

ಕೋಲಾರ ಜಿಲ್ಲೆಯ ಐದು ತಾಲ್ಲೂಕು ಪಂಚಾಯಿತಿಗಳ ವ್ಯಾಪ್ತಿಯಲ್ಲಿ 156 ಗ್ರಾಮ ಪಂಚಾಯಿತಿಗಳಿವೆ. ಆದರೆ ಇದುವರೆಗೆ ಕೇವಲ ಬೆರಳೆಣಿಕೆಯಷ್ಟು ಪಂಚಾಯಿತಿಗಳಲ್ಲಿ ಮಾತ್ರ ಜಮಾಬಂದಿ ನಡೆದಿದೆ. ಬಹುತೇಕ ಪಂಚಾಯಿತಿಗಳಲ್ಲಿ ಇನ್ನೂ ಶುರುವಾಗಬೇಕಿದೆ. 'ಏನು ಮಾಡೋದು? ನರೇಗ, ನಿರ್ಮಲ ಭಾರತ ಅಭಿಯಾನದ ಗುರಿ ಸಾಧಿಸಲು ನಮ್ಮ ಪಿಡಿಓಗಳಿಗೆ ಸಮಯವೇ ಇಲ್ಲದಂತಾಗಿದೆ. ಇನ್ನು ಜಮಾಬಂದಿಗೆ ಸಮಯ ಎಲ್ಲಿ ಬಂತು?' ಎನ್ನುತ್ತಾರೆ ತಾಲ್ಲೂಕು ಪಂಚಾಯಿತಿಯೊಂದರ ಕಾರ್ಯನಿರ್ವಹಣಾಧಿಕಾರಿಯೊಬ್ಬರ

ಸಮಯಾಭಾವದ ಕಾರಣದಿಂದಲೇ ಗ್ರಾಮ ಪಂಚಾಯಿತಿಗಳಲ್ಲಿ ಇನ್ನೂ ಜಮಾಬಂದಿ ನಿರ್ವಹಣೆಯ ತಂಡಗಳೇ ರಚನೆಯಾಗಿಲ್ಲ. ಇ

ಆದರೆ ಸೆಪ್ಟೆಂಬರ್ 15 ಆದರೂ, ವೇಳಾಪಟ್ಟಿಯೇ ಸಿದ್ಧಗೊಂಡಿಲ್ಲ. ಜಮಾಬಂದಿ ವೇಳಾಪಟ್ಟಿಯನ್ನು ಎಲ್ಲ ಗ್ರಾಮ ಪಂಚಾಯಿತಿಗಳಿಗೆ ಸ
ದಿನ ಮುಂಚಿತವಾಗಿ ಕಳುಹಿಸಬೇಕು ಎಂಬ ಸಾಮಾನ್ಯ ನಿಯಮವಿದೆ. ಆ ನಿಯಮದ ಪ್ರಕಾರವೇ ನಡೆದರೂ, ಕೋಲಾರ ಜಿಲ್ಲೆಯಲ್ಲಿ
ಜಮಾಬಂದಿ ಎಲ್ಲೆಡೆ ಶುರುವಾಗಲು ಇನ್ನೂ ಒಂದು ತಿಂಗಳಾದರೂ ಬೇಕಾಗುತ್ತದೆ.

ಜಮಾಬಂದಿ ಎಂದರೆ ಗ್ರಾಮ ಪಂಚಾಯಿತಿಯ ಎಲ್ಲ ಲೆಕ್ಕ ಮತ್ತು ರಿಜಿಸ್ಟರ್‌ಗಳ ತನಿಖೆಯಷ್ಟೇ ಅಲ್ಲ. ಜಮಾಬಂದಿ ಅಧಿಕಾರಿ ಮತ್ತು
ತಂಡ ಆಯ್ದ ಕಾಮಗಾರಿಗಳ ತನಿಖೆಯನ್ನೂ ಮಾಡುತ್ತದೆ. ಆದರೆ ಇಷ್ಟೊಂದು ಗಂಭೀರವಾಗಿ ಜಮಾಬಂದಿಗಳು ನಡೆಯುವುದಿಲ್ಲ ಎ
ದೂರುಗಳೂ ಸಾಮಾನ್ಯವಾಗಿ ಕೇಳಿಬರುತ್ತವೆ. ಉದಾಹರಣೆಗೆ, ನಿರ್ಮಲ ಭಾರತ ಅಭಿಯಾನದ ಅಡಿಯಲ್ಲಿ ವೈಯಕ್ತಿಕ ಶೌಚಾಲಯ
ಪ್ರಗತಿ ಸಾಧಿಸುವ ಸಲುವಾಗಿ ಪಂಚಾಯಿತಿ ಕೇಂದ್ರದಲ್ಲಿಯೇ ಕಾರ್ಯಾದೇಶವನ್ನು ನೀಡುವ ಅಭಿಯಾನ ರಾಜ್ಯದೆಲ್ಲೆಡೆ ಈಗ
ಶುರುವಾಗಿದೆ. ಆದರೆ ಈ ಅಭಿಯಾನಕ್ಕೂ ಮುನ್ನ ಹಲವು ವರ್ಷಗಳ ಹಿಂದೆ ನಿರ್ಮಿಸಿದ ಶೌಚಾಲಯಗಳಿಗೆ ಹಣವನ್ನೇ ನೀಡಿಲ್ಲ ಎಂ
ದೂರುಗಳೂ ಇವೆ.

ಜಮಾಬಂದಿ ನಡೆಸುವವರ ಪ್ರಮುಖ ಜವಾಬ್ದಾರಿಗಳಲ್ಲಿ, ಫಲಾನುಭವಿ ಆಧಾರಿತ ಯೋಜನೆಗಳಲ್ಲಿ ಫಲಾನುಭವಿಗಳು ಪೂರ್ಣ
ಮೊತ್ತವನ್ನು ಸ್ವೀಕರಿಸಿದ್ದಾರೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದೂ ಒಂದು. ಆದರೆ ಹಾಗೆ ಖಚಿತಪಡಿಸಿಕೊಳ್ಳುವ ಪ್ರಯತ್ನಗ
ಮಾತ್ರ ಸಮರ್ಪಕವಾಗಿ ನಡೆಯುವುದೇ ಇಲ್ಲ.

ಕೋಲಾರ ತಾಲ್ಲೂಕು ಪಂಚಾಯಿತಿಯ ಸಾಮರ್ಥ್ಯ ಸೌಧದಲ್ಲಿ ಗ್ರಾಮ ಪಂಚಾಯಿತಿ ಸದಸ್ಯರಿಗೆ ಕೆಲವು ತಿಂಗಳ ಹಿಂದೆ ಏರ್ಪಡಿಸಿದ್ದ
ಶೌಚಾಲಯ ಜಾಗೃತಿ ಕಾರ್ಯಾಗಾರದಲ್ಲಿ, ನಿರ್ಮಲ ಭಾರತ ಅಭಿಯಾನದ ಜಿಲ್ಲಾ ಸಂಯೋಜಕರನ್ನು ಸದಸ್ಯರೆಲ್ಲರೂ ಒಟ್ಟಾಗಿ
ತರಾಟೆಗೆ ತೆಗೆದುಕೊಂಡಿದ್ದರು. ಹಿಂದಿನ ವರ್ಷದ ಅನುದಾನವನ್ನೇ ಜನರಿಗೆ ನೀಡದಿದ್ದರೆ ಮತ್ತೆ ಅವರಲ್ಲಿ ಜಾಗೃತಿಯ ಮಾತನಾಡು
ಹೇಗೆ ಎಂಬುದು ಸದಸ್ಯರ ಪ್ರಶ್ನೆಯಾಗಿತ್ತು. ಜಮಾಬಂದಿ ಸರಿಯಾಗಿ ನಡೆದಿದ್ದರೆ ಈ ಸನ್ನಿವೇಶ ಸೃಷ್ಟಿಯಾಗುತ್ತಿರಲಿಲ್ಲ.

ಸರ್ಕಾರದ ಅನುದಾನಗಳ ಬಳಕೆ, ಮಾಸಿಕ ಲೆಕ್ಕಪತ್ರ, ಪರಿಶಿಷ್ಟ ಸಮುದಾಯಕ್ಕೆ ಮೀಸಲಿಟ್ಟ ಅನುದಾನದ ಬಳಕೆ, ಪಂಚಾಯಿತಿಯ
ಇತರೆ ಸಮಿತಿಗಳ ಕಾರ್ಯನಿರ್ವಹಣೆಯನ್ನೂ ಜಮಾಬಂದಿ ಸಂದರ್ಭದಲ್ಲಿ ಪರಿಶೀಲಿಸಬೇಕಾಗುತ್ತದೆ. ಆದರೆ ಅದಕ್ಕೆಲ್ಲ ಸಮಯ
ಎಲ್ಲಿದೆ? ಕೋಲಾರ ತಾಲ್ಲೂಕಿನ ಮಾರ್ಜೇನಹಳ್ಳಿ ಪಂಚಾಯಿತಿಯಲ್ಲಿ 2004ರಿಂದ ನಡೆದಿರುವ ಅವ್ಯವಹಾರಗಳ ಕುರಿತು ತನಿಖೆ
ನಡೆಯಬೇಕು ಎಂದು ಗ್ರಾಮಸ್ಥರು ಸುದ್ದಿಗೋಷ್ಠಿಯಲ್ಲಿ ಇತ್ತೀಚೆಗಷ್ಟೇ ಆಗ್ರಹಿಸಿದ್ದರು.

ಹಲವು ಬಾರಿ ದೂರು ನೀಡಿದರೂ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾಧಿಕಾರಿ ಸೇರಿದಂತೆ ಯಾರೂ ಕ್ರಮ
ಕೈಗೊಂಡಿಲ್ಲ ಎಂಬುದು ಅವರ ದೂರು ಆಗಿತ್ತು. ಜಮಾಬಂದಿ ಸಮಯದಲ್ಲಿ ಇವೆಲ್ಲವೂ ಚರ್ಚೆಗೆ ಬರುವಂತೆ ನೋಡಿಕೊಳ್ಳಲಿಲ್ಲವೇ?
ಎಂದು ಕೇಳಿದರೆ, ಜಮಾಬಂದಿ ನಡೆದರೆ ತಾನೇ? ಎಂಬ ಪ್ರತ್ಯುತ್ತರ ಬಂತು! ಇದೇ ವೇಳೆ, ಸುದ್ದಿಗೋಷ್ಠಿ ಬಳಿಕ ಹೊರ ಬಂದ
ಮುಖಂಡರೊಬ್ಬರು ಜಮಾಬಂದಿ ಎಂದರೆ ಏನು? ಎಂಬ ಮುಗ್ಧ ಪ್ರಶ್ನೆ ಕೇಳಿದರು.

ಆಸ್ತಿ ತೆರಿಗೆ, ತೆರಿಗೆ ಪಾವತಿ ಮಾಡದವರ ವಿವರಗಳು, ದಿನವಹಿ ಪುಸ್ತಕ ಮತ್ತು ನಗದು ಪುಸ್ತಕದ-ದಾಖಲೆಯ ಹೊಂದಾಣಿಕೆ, ಪರವ
ಶುಲ್ಕ ಉಪಕರ, ಆಸ್ತಿ ದಾಖಲೆಗಳು, ಹಣಕಾಸಿನ ಆಯೋಗದ ಹಣದ ಲಭ್ಯತೆ, ಅನುದಾನ ದೊರಕಿದ ಸಮಯ, ಕ್ರಿಯಾಯೋಜನೆ,
ಪಂಚಾಯಿತಿ ದಾಖಲೆಗಳು, ಆಸ್ತಿ ದಾಖಲೆ ಪುಸ್ತಕ, ಬಿಪಿಎಲ್ ಪಟ್ಟಿ, ಮನೆ ನಿವೇಶನ ಇಲ್ಲದವರ ಪಟ್ಟಿ, ಕಾಮಗಾರಿಗಳು, ಸಿಬ್ಬಂದಿ, ಎ
ಸರಬರಾಜು, ಆಯವ್ಯಯ, ಲೆಕ್ಕ ಪರಿಶೋಧನೆ, ಗ್ರಾಮ ಪಂಚಾಯಿತಿಯ ಸಭೆಗಳು, ಸಭೆಯ ನಡಾವಳಿಗಳ ನಿರ್ವಹಣೆ....ಜಮಾಬಂ
ಸಮಯದಲ್ಲಿ ಈ ಎಲ್ಲ ವಿಷಯಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಬೇಕು.

ಈ ಪಟ್ಟಿಯನ್ನು ಗಮನಿಸಿದರೆ, ಒಮ್ಮೆ ಒಂದು ಪಂಚಾಯಿತಿಯಲ್ಲಿ ಜಮಾಬಂದಿ ನಡೆದಿದೆ ಎಂದಾದರೆ, ಆ ಪಂಚಾಯಿತಿಯ ಕಾರ್ಯನಿರ್ವಹಣೆಯ ಎಲ್ಲ ಲೋಪ-ದೋಷ, ಸಾಧಕ-ಬಾಧಕಗಳು ಪಂಚಾಯಿತಿ ವ್ಯಾಪ್ತಿಯ ಎಲ್ಲರಿಗೂ ಸ್ಪಷ್ಟಗೊಳ್ಳುತ್ತವೆ. ಮುಂದಿನ ವರ್ಷದ ಕಾರ್ಯನಿರ್ವಹಣೆಗೊಂದು ಹೊಸ ದಾರಿಯೂ ತೆರೆದುಕೊಳ್ಳುತ್ತದೆ. ಇದು ಪಾರದರ್ಶಕ ಆಡಳಿತಕ್ಕೆ ಇರುವ ಅತ್ಯುತ್ತಮ ಮಾ

ಜಮಾಬಂದಿ ಗ್ರಾಮ ಪಂಚಾಯಿತಿ ಆಡಳಿತದ ಖಾಸಗಿ ವಿಷಯವಲ್ಲ. ಅದು ಸಾಮಾಜಿಕ ಪರಿಶೋಧನೆಯ ಜವಾಬ್ದಾರಿ. ಬಹಿರಂಗವಾ ನಡೆಯುವ ಪರಿಶೋಧನೆ, ತಪಾಸಣೆ. ಆದರೆ ಈ ಪ್ರಕ್ರಿಯೆ ಬಗ್ಗೆ ಹಳ್ಳಿಗಳಲ್ಲಿ ಬಹುಮಂದಿಗೆ ಅರಿವಿನ ಕೊರತೆ ಇದೆ. ಅದಕ್ಕೆ ಮೂಲ ಕಾರಣ, ಜಮಾಬಂದಿಯ ಕುರಿತ ಪ್ರಚಾರದ ಕೊರತೆ. ಪಂಚಾಯಿತಿಯಲ್ಲಿ ಜಮಾಬಂದಿ ಎಂಬುದೊಂದು ವಾರ್ಷಿಕ ಚಟುವಟಿಕೆ ನಡೆ ತ್ತದೆ, ನಡೆಯಬೇಕು ಎಂಬುದೇ ಬಹುತೇಕ ಹಳ್ಳಿ ಜನರಿಗೆ ತಿಳಿಯದ ಸನ್ನಿವೇಶವೂ ಇದೆ. ಜಮಾಬಂದಿ ಸಂದರ್ಭದಲ್ಲಿ ಜನರಿಂದ ದೂರುಗಳ ಸ್ವೀಕಾರದ ಮಾತಂತೂ ದೂರವೇ ಉಳಿದಿದೆ.

ಜಮಾಬಂದಿ ಕಚೇರಿ ವ್ಯವಹಾರವಾಗಿಯಷ್ಟೇ ಉಳಿದಿರುವ ಪರಿಣಾಮ ಇದು. ಜಮಾಬಂದಿ ನಡೆಸುವ ಕಾರ್ಯನಿರ್ವಹಣಾಧಿಕಾರಿಯ ಜಮಾಬಂದಿಯ ವರದಿಯನ್ನು ತಾಲ್ಲೂಕು ಪಂಚಾಯಿತಿಯ ಮುಂದಿನ ಸಭೆಯಲ್ಲಿ ಮಂಡಿಸಬೇಕು ಎಂದು ಅಧಿನಿಯಮ ಹೇಳುತ್ತದೆ. ಆದರೆ ಅಂಥ ಮಂಡನೆಗಳಿಗೂ ಸಮಯಾವಕಾಶವಿರುವುದಿಲ್ಲ. ಅಥವಾ 'ಇಷ್ಟು ಗ್ರಾಮ ಪಂಚಾಯಿತಿಗಳಲ್ಲಿ ಜಮಾಬಂದಿ ನಡೆದಿದೆ... ಎಂಬ ಒಂದು ಸಾಲಿನ ಮಂಡನೆ ನಡೆಯುತ್ತದೆ.

ಜಮಾಬಂದಿಯ ವರದಿಗಳ ಬಗ್ಗೆಯೂ ಗಂಭೀರ ಚರ್ಚೆಗಳು ನಡೆಯುವುದಿಲ್ಲವಾದ್ದರಿಂದ, ಜಮಾಬಂದಿ ನಡೆಸುವ ಬಗೆಗೆ ಪಂಚಾ-ಯಿತಿಗಳು ತಾಳಬೇಕಾದ ಗಂಭೀರ ನಿಲುವಿಗೇ ಪೆಟ್ಟು ಬೀಳುತ್ತಿದೆ ಎಂಬುದನ್ನೂ ಗಮನಿಸಬೇಕಾಗಿದೆ. ಜಮಾಬಂದಿಗೆ ಸಾರ್ವಜನಿಕ ವಲಯದಲ್ಲಿ, ಪಂಚಾಯಿತಿ ಸದಸ್ಯರ ವಲಯದಲ್ಲಿ ಹೆಚ್ಚು ಪ್ರಚಾರ ಕೊಡದೇ ಹೋದರೆ ಇದೊಂದು ಅಧಿಕಾರಿಗಳ ಪ್ರೋಟೋಕಾಲ್ ಕಾರ್ಯಕ್ರಮವಾಗಿಯಷ್ಟೇ ನಡೆದು, ಹಾಳೆಗಳ ಮೇಲಷ್ಟೇ ಇರುತ್ತದೆ. ಪಂಚಾಯಿತಿಗಳು ಮಾತ್ರ ಅಭಿವೃದ್ಧಿ ಕಾಣದ ರೋಗಗ್ರಸ್ತ ಸ್ಥಿತಿಯಲ್ಲೇ ಉಳಿಯುವಂತಾಗುತ್ತದೆ.